ಶ್ರೀ ವಿ. ಎನ್. ಪಾಟೀಲ್—ತಾವು ಹೀಗೆ ಮಾತಾಡುವುದು ಸರಿಯಲ್ಲ. Now I will walk out in protest against the Chair. (At this stage the member walked out).

SRI H. M. CHANNABASAPPA.—I raised a point of order. It is not in order for the hon. member to cast any aspersion against the Chair. ಸದಸ್ಯರು ಹೀಗೆ ಇಲ್ಲಿ ಮಾತಾಡುವುದು ಸರಿಯಲ್ಲ. ಈ ಸಭೆಗೆ ಒಂದು ರೀತಿಯಾದ ಗೌರವ ಹಾಗೂ ಗಾಂಭೀರ್ಯತೆ ಇದೆ. ಇದನ್ನು ಮಾನ್ಯ ಸದಸ್ಯರಾದ ಶ್ರೀ ಪಾಟೀಲರವರೂ ತಿಳಿದುಕೊಳ್ಳಬೇಕು.

SRI S. BANGARAPPA.—Unless the Question Hour is over, how can the hon. Minister for Public Works raise a point of order ? The point of order can be raised only after the Question Hour according to the rules.

MADAM SPEAKER —I uphold the point of order raised by the Hon. Minister for Public Works Sri V. N. Patil's behaviour is not correct. Do you all agree with his behaviour ? ಇದರಲ್ಲಿ ಇನ್ನೂ ಹನ್ನೊಂದು ಪ್ರಶ್ನೆಗಳಿವೆ. ಮತ್ತು ಇರುವ ಸಮಯ ಸಾಲದು. ಎಲ್ಲರಿಗೂ ಹೇಗೆ ಕಾಲಾವಕಾಶ ಕೊಡಲು ಸಾಧ್ಯ ? ಶ್ರೀ ಕಾಗೋಡು ತಿಮ್ಮಪ್ಪನವರ ಪ್ರಶ್ನೆಯೂ ಇದೆ. ಅದು ಮುಖ್ಯವಲ್ಲ ಎಂದು ಬಿಡಲಾಗುತ್ತದೆಯೇ ? ಪ್ರತಿಯೊಬ್ಬರಿಗೂ ಉಪ ಪ್ರಶ್ನೆಗಳಿಗೆ ಅವಕಾಶ ಕೊಡಬೇಕು ಎಂದರೆ ಅದು ಹೇಗೆ ಮಾಡುವುದು ? ಇದನ್ನು ಸದಸ್ಯರು ಅರಿತುಕೊಳ್ಳಬೇಕು. Sri Kagodu Thimmappa's question is there. Is it not important for you ? Do you support his walk out

SRI S. BANGARAPPA.—My submission to the Chair is—I do not wish to say anything about the merit or demerit of this matter (about Sri V. N. Patil's behaviour),—raising a point of order during the course of Question Hour is not in order according to rule. I limited my speech only to that extent.

MADAM SPEAKER.—Raising of a point of order by the Hon. Minister for Public Works was perfectly in order.

SRI S. BANGARAPPA.—Raising a point of order during Question Hour is not permissible.

SRI. H. M. CHANNABASAPPA.—I will raise the point of order at the appropriate time,

SRI S. BANGARAPPA.—I agree now with the Hon. Minister.

SETTLEMENT OF BILLS OF WORK DONE UNDER "64 FAMINE" IN TUMKUR DISTRICT

221 SRI R. CHIKKAIAH (Madhugiri).—Will the Minister for Revenue be pleased to state :—

(*a*) whether it has come to the notice of the Government that a number of bills are pending in Tumkur District for the works taken up and done under "64 Famine" by the Public Works Department and Taluk Developments Boards ;

(*b*) the total amount required for settlement of the pending bills ;

(*c*) the arrangements made by the Government for early payments of the same and when ?

SRI N. HUTCHAMASTHY GOWDA (Minister for Revenue).—

(*a*) Yes.

(*b*) Rs. 29,55,756.

(*c*) The release of additional funds by Government of India is awaited.

ಆರ್. ಚಿಕ್ಕಯ್ಯ.—ಸುಮಾರು ೨೯ ಲಕ್ಷ ಚಿಲ್ಲರೆ ರೂಪಾಯಿ ಇನ್ನೂ ಇತ್ಯರ್ಥವಾಗದೇ ಉಳಿದಿರುವ ಬಿಲ್ಲುಗಳಿಗೆ ಕೊಡಬೇಕಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಕೆಲವು ಕೆಲಸಗಳು ಆಗಿವೆ ಮತ್ತು ಕೆಲವು ಕೆಲಸಗಳಾಗದೆ ಅರ್ಧದಲ್ಲೇ ನಿಂತಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅರ್ಧಂಬರ್ಧ ಆಗಿರತಕ್ಕ ಕೆಲಸಗಳೂ ಕೆಲವು ಇವೆ.

ಶ್ರೀ ಆರ್. ಚಿಕ್ಕಯ್ಯ.—ಇದಕ್ಕೆ ಕೊಡುವ ಹಣವನ್ನು ಯಾವಾಗ ಒದಗಿಸುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಕೆಲಸವಾಗಿರುವ ಕೆಲಸಗಳ ಬಿಲ್ಲುಗಳು ಇವೆ. ಇವಕ್ಕೆ ಕೊಡಬೇಕಾಗುವ ಹಣವನ್ನು ಕೊಟ್ಟು ಆಮೇಲೆ ಇದನ್ನು ಯಾವರೀತಿ ಕೊಡಬೇಕು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಆರ್ ಚಿಕ್ಕಯ್ಯ.—ಜೂನ್ ತಿಂಗಳೊಳಗೆ ಹಣ ಕೊಡದೇ ಇದ್ದರೆ ಇಲ್ಲಿನ ಜನಕ್ಕೆ ತೊಂದರೆ ಯಾಗುತ್ತದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಿಲ್ಲುಗಳನ್ನು ಕೊಡದೆ ಇದ್ದರೆ ತೊಂದರೆಯಾಗುತ್ತದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆ. ಆದರೆ ಇಲ್ಲಿ ಸರಕಾರ ಎಷ್ಟು ಕೆಲಸಗಳನ್ನು ಮಾಡಬೇಕೆಂದು ನಿಗದಿ ಮಾಡಲಾಗಿತ್ತೋ ಆ ಮಿತಿಯನ್ನು ಮೀರಿ ಆದಕ್ಕಿಂತ ಹೆಚ್ಚು ಕೆಲಸಗಳನ್ನು ಮಾಡಿರುವುದರಿಂದಾಗಿ ಇಲ್ಲಿ ಹೆಚ್ಚಿನ ಹಣ ಕೊಡಬೇಕಾಗಿ ಬಂದಿದೆ. ಇದರಿಂದ ಇಲ್ಲಿ ಹಣ ಕೊಡುವುದು ನಿಧಾನವಾಗುತ್ತಿದೆ. ಮೊದಲು ಪೆಂಡಿಂಗ್ ಬಿಲ್ಸ್‌ಗಳಿಗೆ ಹಣ ಕೊಟ್ಟು ಆ ನಂತರ ಉಳಿದ ಕೆಲಸಗಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ಬಾಕಿ ಇರುವ ಬಿಲ್ಸ್‌ಗಳಿಗಾಗಿ ಸುಮಾರು ೨೯ ಲಕ್ಷ ರೂಪಾಯಿ ಹಣ ಬಾಕಿ ಇದೆ ಎಂದು ಹೇಳಿದ್ದೀರಿ. ೬ಳಿ ಫ್ಯಾಮಿನ್ ಹೆಡ್‌ನಲ್ಲಿ ಎಷ್ಟು ಹಣವನ್ನು ಈ ಜಿಲ್ಲೆಗೆ ಒದಗಿಸಿದ್ದಿರಿ ಮತ್ತು ಇದುವರೆಗೆ ಅದರಲ್ಲಿ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ವಿವರಗಳು ನನ್ನಲ್ಲಿಲ್ಲ. ಆದರೂ ನನಗೆ ಜ್ಞಾಪಕ ವಿರುವಂತೆ ಸುಮಾರು ೨೧ ಲಕ್ಷ ಚಿಲ್ಲರೆ ರೂಪಾಯಿ ಹಣ ಈಗಾಗಲೇ ಕೊಡಲಾಗಿದೆ.—ಇದರ ಎರಡರಷ್ಟು ಖರ್ಚು ಬಂದರೂ ಅದನ್ನು ಖರ್ಚು ಮಾಡಬಹುದು ಎಂದು ಇಲ್ಲಿನ ಅಧಿಕಾರಿಗಳಿಗೆ ತಿಳಿಸಲಾಗಿತ್ತು. ಆದರೆ ಇಲ್ಲಿ ಈ ಮಿತಿಯನ್ನೂ ಮೀರಿ ಖರ್ಚಾಗಿದೆ.

ಶ್ರೀ ಟಿ. ಎಂ. ಮಂಜುನಾಥ.—ಹಿಂದೆ ಈ ಸದನದಲ್ಲಿ ಹೇಳಿದ ಹಾಗೆ ಒಬ್ಬೊಬ್ಬರೂ ಮಂತ್ರಿಗಳ ಒಂದೊಂದು ಜಿಲ್ಲೆಯ ಬರಗಾಲದ ಕೆಲಸಗಳನ್ನು ವಹಿಸಿಕೊಳ್ಳುತ್ತಾರೆ ಮತ್ತು ಅವರ ಸೂಚನೆಯಂತೆ ಕೆಲಸಗಳನ್ನು ಮಾಡುತ್ತಾರೆ ಎಂದು ಹೇಳಲಾಗಿತ್ತು. ಆದೇ ರೀತಿ ಮಂತ್ರಿಗಳು ಬಂದಿದ್ದರು ಮತ್ತು ಅಲ್ಲಿನ ಡಿಸ್ಟ್ರಿಕ್ಟ್ ರಿಲೀಫ್ ಕಮಿಟಿಯಲ್ಲಿ ಅಲ್ಲಿನ ಬರಗಾಲದ ಕೆಲಸಗಳು ಎಷ್ಟೇ ಇರಲಿ ಅವನ್ನು ತೆಗೆದು ಕೊಂಡು ಪೂರ್ತಿ ಮಾಡಿದರೆ ಆದಕ್ಕೆ ಎಷ್ಟು ಹಣ ಬೇಕಾದರೂ ಕೊಡುತ್ತೇವೆಂದು ಹೇಳಿ ಬಂದಿದ್ದರು. ಹಾಗಿರುವಾಗ ಕೆಲಸಮಾಡಿರತಕ್ಕ ಅಲ್ಲಿನ ಜನರ ಬಿಲ್‌ಗಳಿಗೆ ಹಣಪಾವತಿ ಮಾಡದೇ ಇದ್ದರೆ ತೊಂದರೆ ಯಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಜಿಲ್ಲೆಗೆ ಬಂದಿದ್ದ ಮಂತ್ರಿಗಳು ಬರಗಾಲದ ಕೆಲಸ ಮಾಡಬೇಕು ಎಂದು ಹೇಳಿದ್ದರು. ಈ ಕೆಲಸಕ್ಕೆ ಪರಮಾವಧಿ ಹಣ ಎಷ್ಟು ಹಣ ಎಂದು ಗೊತ್ತು ಮಾಡಲಾಗಿತ್ತೋ ಅದಕ್ಕೂ ಮೀರಿ ಇಲ್ಲಿನ ಕೆಲಸಗಳು ಆಗಿರುವುದರಿಂದ ಇದರ ಹಣವನ್ನು ಕೊಡಬೇಕಾಗಿ ಒಂದಿದೆ. ಇದನ್ನು ಯಾವ ರೀತಿ ಒದಗಿಸಬೇಕು ಎನ್ನುವುದನ್ನು ಸರಕಾರ ವಿಚಾರ ಮಾಡಿ ತೀರ್ಮಾನ ಮಾಡಬೇಕಾಗಂತ್ತವೆ.

ಶ್ರೀ ಆರ್. ಚಿಕ್ಕಯ್ಯ.—ಇದಕ್ಕೆ ಬೇಕಾಗುವ ಹಣವನ್ನು ಈ ತಿಂಗಳಲ್ಲೇ ಒದಗಿಸಲು ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಯತ್ನ ಮಾಡುತ್ತೇವೆ.

WORKS TAKEN UP IN TUMKUR DISTRICT UNDER "64 FAMINE"

222 Sri R. Chikkaiah (Madhugiri).—Will the Minister for Revenue be pleased to state :—

(*a*) the number of incomplete works taken up under 64 Famine in Tumkur district ;

(*b*) the measures that the Government would take to complete the incomplete works ,

(*c*) when these works would be completed ?

Sri N. Hutchamasthy Gowda (Minister for Revenue).—

(*a*) 426.

(*b*) and (*c*) The steps to be taken to bring these works to a safe stage are under examination.

ಶ್ರೀ ಆರ್. ಚಿಕ್ಕಯ್ಯ.—ಸಾಮಾನ್ಯವಾಗಿ ತುಮಕೂರು ಜಿಲ್ಲೆಯಲ್ಲಿ ಸರಿಯಾಗಿ ಮಳೆ ಬಾರದೆ ಇರುವುದರಿಂದ ಇಲ್ಲಿನ ಹಳ್ಳಿಗಳಲ್ಲಿ ಬರುವ ಬೆಳೆ ಬಾರದೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ,—ಯಾವ ಯಾವ ಭಾಗದಲ್ಲಿ ತೊಂದರೆಯಾಗಿದೆ ಎನ್ನುವುದು ಸ್ವಲ್ಪಮಟ್ಟಿಗೆ ನನಗೆ ಗೊತ್ತಿದೆ.

ಶ್ರೀ ಆರ್. ಚಿಕ್ಕಯ್ಯ.—ಹಾಗಿದ್ದರೆ ಇಲ್ಲಿನ ಜನಕ್ಕೆ ತೊಂದರೆಯಾಗಿರುವುದೂ ಗೊತ್ತಿದೆಯೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೊತ್ತಿದೆ. ಮತ್ತು ಇಲ್ಲಿ ಏನು ಕೆಲಸಗಳಾಗಬೇಕು ಎನ್ನುವುದೂ ಗೊತ್ತಿದೆ ಮತ್ತು ಅವನ್ನು ಮಾಡಬೇಕು ಎನ್ನುವುದೂ ಗೊತ್ತಿದೆ.

ಶ್ರೀ ಆರ್. ಚಿಕ್ಕಯ್ಯ.—ಇದಕ್ಕಾಗಿ ಇಲ್ಲಿ ಬರಗಾಲ ಮುಗಿದ ಮೇಲೂ ಇಲ್ಲಿನ ಕೆಲಸಗಳನ್ನು ಮುಂದುವರಿಸುವುದು ಅಗತ್ಯವಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಆಗಲೇ ಬೇರೆ ಪ್ರಶ್ನೆಗೆ ಉತ್ತರ ಕೊಡುವಾಗ ವಿವರವಾಗಿ ಹೇಳಿದ್ದೆ. ಇತ್ಯರ್ಥವಾಗದೆ ಉಳಿದಿರುವ ಬಿಲ್‌ಗಳಿಗೆ ಕೊಡಬೇಕಾದ ಹಣವನ್ನು ಮೊದಲು ಕೊಟ್ಟು ಆಮೇಲೆ ಮುಂದೆ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎನ್. ಬಸವಯ್ಯ.—ಬಿಳಿ ಫ್ಯಾಮಿನ್ ಹೆಡ್‌ನಲ್ಲಿ ಹಣವನ್ನು ಖರ್ಚು ಮಾಡಬೇಕೆಂದು ಎಲ್ಲ ಜಿಲ್ಲೆಗಳಿಗೂ ಸೂಚನೆಗಳನ್ನು ಕೊಟ್ಟಂತೆ ತುಮಕೂರು ಜಿಲ್ಲೆಗೂ ಕೊಡಲಾಗಿತ್ತು. ಆದರೆ ಇಲ್ಲಿನ ಜಿಲ್ಲಾ ರಿಲೀಫ್ ಕಮಿಟಿಯಲ್ಲಿ ಅಲ್ಲಿಗೆ ಬಂದಿದ್ದ ಎಕ್ಸಿಕ್ಯೂಟೀವ್ ಇಂಜನೀಯರ್‌ರವರು ಡೆಪ್ಯೂಟಿ ಕಮಿಷನರ್‌ರವರಿಗೆ